not doing it now? You are not doing it because they are occupying high position.

ಶ್ರೀ ಸಿ. ಬೈರೇಗೌಡ:– ನಮಗೆ ಸರ್ಕಾರದ ಉತ್ತರ ತೃಪ್ತಿ ತಂದಿಲ್ಲ. ನಾನು ಇದನ್ನು ವಿರೋಧ ಮಾಡಿ ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:– ಶ್ರೀ ವೈ.ಕೆ. ರಾಮಯ್ಯ ಅವರು ಹಾಗೂ ಶ್ರೀ ಬೈರೇಗೌಡ ಅವರು ಕಳುಹಿಸಿದ ನಿಲುವಳಿ ಸೂಚನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ವಿವರ ನೀಡಿದ್ದರ ಹಿನ್ನೆಲೆಯಲ್ಲಿ ಇದಕ್ಕೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಬಂದ ಉತ್ತರ ನನಗೆ ತೃಪ್ತಿ ಆಗಿಲ್ಲ. ಆದ್ದರಿಂದ ನಾನು ಸಹ ವಾಕೌಟ್ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

1) 8 ಮತ್ತು 9ನೇ ತರಗತಿಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಈಗ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಪರೀಕ್ಷೆಗಳು ಬರುತ್ತಿವೆ. ಈ ಹಿಂದೆ ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ 8ಹಾಗೂ 9ನೇ ತರಗತಿಯ ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಾಗ ಅವರು ಆ ಬಗ್ಗೆ ಗಮನ ಕೊಟ್ಟಿಲ್ಲ. ಅದಾದ ನಂತರ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಾಗ ಮರು ಪರೀಕ್ಷೆಗೆ ಅವರು ಆಜ್ಞೆ ಮಾಡಿದ್ದಾರೆ. ಇವತ್ತು ಎಸ್.ಎಸ್.ಎಲ್.ಸಿ. ಪಿ.ಯು.ಸಿ ಪರೀಕ್ಷೆಗಳು ಬರುತ್ತಿವೆ. ಹಿಂದೆ ತಾವು ಜಾಗೃತ ದಳ ನೇಮಕ ಮಾಡಿದ್ದಿರಿ. ಇವತ್ತು ಮರು ಪರೀಕ್ಷೆ ಎನ್ನುವುದು ಪರಿಹಾರ ಆಗುವುದಿಲ್ಲ. ಇವತ್ತು ಪ್ರಶ್ನೆಪತ್ರಿಕೆ ಬಹಿರಂಗಗೊಳ್ಳುವ ವಿಚಾರದಲ್ಲಿ ಯಾರು ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸಭಾಪತಿಯವರೇ, ಮೊನ್ನೆ ಶಿಕ್ಷಣ ಸಚಿವರು ಶಿಕಾರಿಪುರದಲ್ಲಿ ಇದ್ದಾಗ 8ಹಾಗೂ 9ನೇ ತರಗತಿಯ ಪ್ರಶ್ನಪತ್ರಿಕೆಗಳು ಬಹಿರಂಗಗೊಂಡ ಬಗ್ಗೆ ಅಲ್ಲಿ ವಿದ್ಯಾರ್ಥಿಗಳು ತಂದುಕೊಟ್ಟರು. ನಾನು ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದು ಆಯಿತು. ಇದು ಪದೇ ಪದೇ ನಡೆಯುತ್ತಿದೆ. ಇವತ್ತು ತನಿಖಾ ದಳ ಏನಿದೆ ಅದನ್ನು ಬಿಗಿ ಮಾಡಬೇಕು. ಇಲ್ಲದಿದ್ದರೆ ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಪ್ರಶ್ನೆಪತ್ರಿಕೆ ಸಿಕ್ಕವರು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ. ಪ್ರಶ್ನೆಪತ್ರಿಕೆಗಳು ಬಹಿರಂಗಗೊಳ್ಳುತ್ತಿರುವ ಈ ಸಮಯದಲ್ಲಿ ಮುಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭ ಆಗುತ್ತಿದೆ. ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳಬೇಕು. ತಕ್ಷಣ ದಯಮಾಡಿ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ಮುಂದೆ ಇದು ಆಗದ ಹಾಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ಈಗ ಪ್ರಶ್ನೆಪತ್ರಿಕೆ ಬಹಿರಂಗಗೊಳ್ಳುತ್ತಿವೆ.

ಅಧ್ಯಕ್ಷರು:– ಈಗ ಶೂನ್ಯ ವೇಳೆಯ ಪ್ರಸ್ತಾಪವನ್ನು ಸಮಾಪ್ತಿ ಮಾಡಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇದು ಬಹಳ ಪ್ರಮುಖವಾದುದು. ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ವಿದ್ಯಾ ಮಂತ್ರಿಗಳಾಗಿದ್ದಾಗ ತನಿಖಾ ದಳ ನೇಮಕ ಮಾಡಿದ್ದರು. ಅದು ಈಗ ಏನಾಗಿದೆ ? ಮುಂದೆ ಪರೀಕ್ಷೆಗಳು ಬರುತ್ತಿವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಜಾಗೃತ ದಳವನ್ನು ನಾವು ಬಲಪಡಿಸುತ್ತೇವೆ. ಸೂಕ್ತವಾದ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡು ಇಂತಹ ಅನಾಹುತ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಮತ್ತೆ ಪ್ರಶ್ನೆಪತ್ರಿಕೆ ಬಯಲು ಆಗಿರುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

11.05 ಪಿ.ಎಂ

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ ತಮ್ಮ ಗಮನಕ್ಕೆ ಈಗಾಗಲೇ ಒಂದು ವಿಷಯ ತಂದಿದ್ದೇನೆ. ವಿಷಯ ಏನೆಂದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ.....

ಅಧ್ಯಕ್ಷರು:– ಅದನ್ನು ನಾಳೆ ತೆಗೆದುಕೊಳ್ಳೋಣ. We will take some other time. ನಾನು ಅವಕಾಶ ಮಾಡಿಕೊಡುತ್ತೇನೆ.

1) ಅಧಿವೇಶನದ ದಿನಗಳನ್ನು ಹೆಚ್ಚಿಸುವ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ:– (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಎಸ್ಟಿಮೇಟನ್ನು ಕೊಟ್ಟಿದ್ದೀರಿ; ಅದರ ಮೇಲೆ ನಾವೇನು ಡಿಸ್ಕಷನ್ ಮಾಡಲಿಕ್ಕೆ ಸಾಧ್ಯವಿದೆ ? ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ it should have come after the demands. ಸಪ್ಲಿಮೆಂಟರಿ ಎಸ್ಟಿಮೇಟನ್ನು ಈಗತಾನೇ ಸದನದಲ್ಲಿ ಕೊಟ್ಟಿದ್ದೀರಿ. ಸಪ್ಲಿಮೆಂಟರಿ ಎಸ್ಟಿಮೇಟನ್ನು ಡಿಮಾಂಡ್ ಆದನಂತರ ತೆಗೆದುಕೊಳ್ಳಿ. ಎರಡನೆಯದು, ಡಿಮಾಂಡ್‌ಗಳು ಏನಿವೆ, ಅವುಗಳ ಬಗ್ಗೆ ಈಗಾಗಲೇ ತಮ್ಮ ಛೇಂಬರಿಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಇದ್ದರು; ಇವತ್ತು ಮತ್ತು 29ನೇ ತಾರೀಖು ಡಿಮಾಂಡ್‌ಗಳ ಬಗ್ಗೆ ಡಿಸ್‌ಕಷನ್ ಮಾಡಬೇಕೆಂದು ಆಗಿದೆ. ನಾವು ರಿಕ್ವೆಸ್ಟ್ ಮಾಡಿದ್ದೇವೆ, ಈಗ ಸ್ವಲ್ಪ ಏನು ಡಿಸ್‌ಕಷನ್ ಆಗಿದೆ ಅದಕ್ಕೆ ರಿಪ್ಲೈ ಕೊಡಿರಿ, 30ನೇ ತಾರೀಖು ಸ್ವಲ್ಪ ತೆಗೆದುಕೊಳ್ಳೋಣ ಎಂಬುದಕ್ಕೆ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಎಲ್ಲ ಡಿಮಾಂಡ್‌ಗಳನ್ನು ಇಷ್ಟು ಒಟ್ಟಿಗೆ ಇಟ್ಟರೆ, ನಾವು ಚರ್ಚೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ 8–10 ಡಿಮಾಂಡ್‌ಗಳ ಬಗ್ಗೆ ಚರ್ಚೆಯನ್ನು ಇವತ್ತು ನಾವು ಶುರು ಮಾಡಬಹುದು. ಬೇರೆಯವುಗಳನ್ನು 29ನೇ ತಾರೀಖು ನಾವು ತೆಗೆದುಕೊಳ್ಳಬಹುದು. ಎಲ್ಲ ಮುಗಿಸಬೇಕೆಂದರೆ ಮಂತ್ರಿಗಳಿಗೂ ಕಷ್ಟ, ನಮಗೂ ಕಷ್ಟ. 48 ಡಿಮಾಂಡ್‌ಗಳ ಬಗ್ಗೆ ಒಟ್ಟಿಗೇ ನಾವು ಚರ್ಚೆಯನ್ನು ಶುರು ಮಾಡಿದರೆ 40 ಜನ ಸಚಿವರು ಎಲ್ಲರೂ ಇಲ್ಲಿಯೇ ಕೂಡಬೇಕು. ಇದರಿಂದ ಸದನ ನಡೆಸುವುದಕ್ಕೆ ಅನಾನುಕೂಲವಾಗಬಹುದು ಜೊತೆಗೆ ಶಾಸಕ ಮಿತ್ರರು ಕೆಲವು ಸಬ್ಜೆಕ್ಟ್‌ಗಳ ಮೇಲೆ ಬೆಳಕು ಚೆಲ್ಲಲಿಕ್ಕೆ ಅನಾನುಕೂಲವಾಗಬಹುದು.

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮುಕ್ತವಾದ ಚರ್ಚೆಯಾಗಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಅದು ನಮ್ಮ ಉದ್ದೇಶ. ನಿನ್ನೆ ಕೂಡ ಹೇಳಿದ್ದೇನೆ. ಎಷ್ಟು ದಿವಸ ಚರ್ಚೆಯಾದರೂ ಕೂಡ ಸರಿ. ಆ ಉದ್ದೇಶಕ್ಕೆ ಓಟ್ ಆನ್ ಅಕೌಂಟ್ ಬೇಡವೆಂದು ಹೇಳಿದ್ದೇವೆ. ಈ ದಿವಸ ಕೂಡ ನಮ್ಮ ಉದ್ದೇಶ ಏನಿತ್ತು ಬಜೆಟ್ ಅಧಿವೇಶನ ಕರೆಯುವಾಗ ಫುಲ್ ಫ್ಲೆಜ್ಡ್ ಡಿಸ್‌ಕಷನ್ ಆಗಬೇಕೆಂದು ಕರೆದಿದ್ದು. ಇನ್ನು ಮುಂದಾದರೂ ನಾವು ಯಾವ ಕಾಲದಲ್ಲಿ, ಯಾವ